ದಿನಾಂಕ: 10.07.2023

ಅಸಲು ದಾವೆ : 122/2019 ಪಿ.ಡಬ್ಲ್ಯೂ.1

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ ವಕೀಲರಾದ ಶ್ರೀ ಬಿ.ಎಸ್.ಎಸ್ ರವರಿಂದಃ</u>**

ಯಶೋಧಮ್ಮ ಮತ್ತು ಪ್ರತಿವಾದಿಗಳು ದಾಖಲೆಯ ಒಕ್ಕಣೆಯನ್ನು ಹೇಳಿ ಬರೆಸಿರುತ್ತಾರೆ. ಆ ಸಮಯದಲ್ಲಿ ಬೇರೆ ಯಾರು ಇದ್ದರು ಎಂದರೆ ನೆನಪಿರುವುದಿಲ್ಲ. ಪತ್ರಕ್ಕೆ ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದರೆ ಪ್ರತಿವಾದಿಗಳು , ಯಶೋಧಮ್ಮ ಮತ್ತು ನಾನು ಸಹಿ ಮಾಡಿರುತ್ತೇವೆ. ಬೇರೆಯವರು ಸಹಿ ಮಾಡಿರುತ್ತಾರಾ ಎಂದರೆ ಸಾಕ್ಷಿಯು ಮೊದಲನೆ ಕರಾರಿನಲ್ಲಿ ಮೇಲೆ ಹೇಳಿದ ವ್ಯಕ್ತಿಗಳು ಸಹಿ ಮಾಡಿದ್ದು, ಸಾಕ್ಷಿ ಸಹಿ ಯಾರು ಹಾಕಿರುತ್ತಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೊದಲನೇ ಕರಾರು ಪತ್ರದ ಮೂಲ ದಾಖಲೆ ನನ್ನ ಬಳಿ ಇತ್ತು . ಸದರಿ ಮೊದಲನೇ ಕರಾರಿನ ಪ್ರಕಾರ ಕ್ರಯ ಪತ್ರ ಬರೆಸಿಕೊಡಲು ನಾನು ಕೇಳಿರುತ್ತೇನೆ. ಮೊದಲನೇ ಕರಾರಿನಲ್ಲಿ ಏನೆಲ್ಲಾ ಬರೆದಿರುತ್ತದೆ ಮತ್ತು ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದು ನನಗೆ ಈಗ ನೆನಪಿರುವುದಿಲ್ಲ. ಮೊದಲನೇ ಕರಾರಿನ ಮೂಲ ದಾಖಲೆ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು 2 ನೇ ಕರಾರು ಮಾಡಿಕೊಳ್ಳುವಾಗ ಮೊದಲನೇ ಕರಾರಿನ ಮೂಲ ದಾಖಲೆಯನ್ನು 2 ನೇ ಪ್ರತಿವಾದಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಬಳಿ ನಾನು ಹೇಳಿದ ಹಾಗೆ ಮೂಲ ಮೊದಲನೆ ಕರಾರು ಇರುವುದಿಲ್ಲ, ಅದು ನನ್ನ ಬಳಿ ಇದೆ ಎಂದರೆ ಸರಿಯಲ್ಲ. ಮೊದಲನೇ ಕರಾರು ಹಾಜರು ಮಾಡಿದರೆ ನನಗೆ ತೊಂದರೆ ಆಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಅದನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಬಳಿ ಮೊದಲನೇ ಕರಾರಿನ ಮೂಲ ದಾಖಲೆ ಇದ್ದರೆ ಅವರು ನಿಡಿ.1 ನ್ನು ಹಾಜರು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಕರಾರು ಪತ್ರದ ಆಧಾರದ ಮೇಲೆ ನಾನು ಪ್ರತಿವಾದಿಗಳಿಗೆ ನೋಟೀಸು ಕೊಟ್ಟಿರುವುದಿಲ್ಲ. ಸದರಿ 1 ನೇ ಕರಾರು ಎಷ್ಟು ವರ್ಷ ಅವಧಿ ನಮೂದಾಗಿತ್ತು ಎಂದರೆ ನೆನಪಿರುವುದದಿಲ್ಲ.

ಗೊರವನಹಳ್ಳಿಯ ದಿಲೀಪ್ ಕುಮಾರ್ ಗೊತ್ತಿದೆಯಾ ಎಂದರೆ ಗೊತ್ತು .ಮದ್ದೂರು ಟೌನ್ ಲೀಲಾವತಿ ಬಡಾವಣೆಯ ಪುಟ್ಟರಾಜು ಬಿನ್ ಕರಿಯಪ್ಪ ಗೊತ್ತ ಎಂದರೆ ನನಗೆ

ಗೊತ್ತಿರುವುದಿಲ್ಲ.  ಮೊದಲನೆ ಕರಾರಿನ ಮಾತುಕತೆಗೆ ಯಾವಾಗ ಸೇರಿರುತ್ತೇವೆ ಎಂದರೆ ನೆನಪಿರುವುದಿಲ್ಲ.  ನನ್ನ ಜನ್ಮ ದಿನಾಂಕ 21.07.1983 ಆಗಿರುತ್ತದೆ. 2 ನೇ ಕರಾರ ಆಗುವ 1 ಒಂದು ತಿಂಗಳ ಹಿಂದೆ ನಮ್ಮ ಮನೆಗೆ ಮಾತುಕತಗೆ ಸೇರಿರುತ್ತೇವೆ. ಆ ಸಮಯದಲ್ಲಿ ಪ್ರತಿವಾದಿಗಳು , ಯಶೋಧಮ್ಮ, ಸಿ.ಎಲ್.ಸುರೇಶ್ ಮತ್ತು ಸೋಮು ಸೇರಿದ್ದರು.  ಆ ಸಮಯದಲ್ಲಿ ಮೊದಲನೆ ಕರಾರಿನಲ್ಲಿ ರೂ.7 ಲಕ್ಷಕ್ಕೆ ಕರಾರು ಪತ್ರ ಆಗಿದ್ದು , ಕ್ರಯದ ಹಣಸಾಲುವುದಿಲ್ಲ ಎಂದು ಹೇಳಿದ ಕಾರಣ ರೂ.16 ಲಕ್ಷಕ್ಕೆ ವ್ಯಾಪಾರ ಆಗಿ 2 ನೇ ಕರಾರು ಪತ್ರ ಆಗಿರುತ್ತದೆ.  ಮೊದಲನೆ ಕರಾರಿನಲ್ಲಿ ತೋರಿಸಿರುವ ಅಷ್ಟೆ ಆಸ್ತಿಗೆ ಸಂಬಂಧಪಟ್ಟಂತೆ 2 ನೇ ಕರಾರು ಹೆಚ್ಚಿನ ಬೆಲೆಗೆ ದಾಖಲೆ ಆಗಿರುತ್ತದೆ.

**ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.